
ಮರುವಿಂಗಡಣೆ ಕಾಯಿದೆ ಕಾರಣಕ್ಕೆ ಎಲೆಕ್ಷನ್ ಮುಂದೂಡಿಕೆ ಸರಿಯಲ್ಲ ಎಂದ ಕೋರ್ಟ್

26-11-20

# ಕ್ಲೈಮ್ಯಾಕ್ಸ್‌ನಲ್ಲಿ ಪಾಲಿಕೆ ಚುನಾವಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಮರು ವಿಂಗಡಣೆಗೆ ಕಾಯಿದೆ ಜಾರಿಗೊಳಿಸಲಾಗಿದೆ ಎಂಬ ಕಾರಣಕ್ಕೆ ಚುನಾವಣೆ ಮುಂದೂಡಿಕೆ ಮಾಡುವ ಸರಕಾರದ ವಾದವನ್ನು ಒಪ್ಪುವುದು ಕಷ್ಟ ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ. ಅಲ್ಲದೆ, ಸರಕಾರವೇ ಏಕೆ ಕಾಯಿದೆ ಅಮಾನತಿನಲ್ಲಿಟ್ಟು ಚುನಾವಣೆ ನಡೆಸಬಾರದು ಎಂದೂ ಕೋರ್ಟ್ ಪ್ರಶ್ನೆ ಮಾಡಿದೆ.



### ಕಾಯಿದೆ ಅಮಾನತಿನಲ್ಲಿಟ್ಟು ಚುನಾವಣೆ ನಡೆಸಲು ಸಾಧ್ಯವಿಲ್ಲವೇ ಎಂದು ಪ್ರಶ್ನೆ

ಪಾಲಿಕೆಗೆ ಶೀಘ್ರ ಚುನಾವಣೆ ನಡೆಸುವಂತೆ ಕೋರಿ ಕಾಂಗ್ರೆಸ್ ಪಕ್ಷದ ಪಾಲಿಕೆಯ ಮಾಜಿ ಸದಸ್ಯ ಎಂ. ಶಿವರಾಜು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕುರಿತು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠ ಬುಧವಾರ ವಿಚಾರಣೆ ನಡೆಸಿತು. ವಾದ ಪ್ರತಿವಾದ ದಾಖಲಿಸಿಕೊಂಡ ಪೀಠ, ತೀರ್ಪು ಕಾಯ್ದಿರಿಸಿರುವುದಾಗಿ ತಿಳಿಸಿತು.

''ಪಾಲಿಕೆಯ ಅಧಿಕಾರವಧಿ ಮುಗಿದ ಬಳಿಕ ವಾರ್ಡ್ ಮರು ವಿಂಗಡಣೆಗೆ ಕಾಯಿದೆ ಜಾರಿಗೊಳಿಸಲಾಗಿದೆ, ಹಾಗಾಗಿ, ಚುನಾವಣೆ ನಡೆಸಲಾಗುತ್ತಿಲ್ಲ ಎಂದು ಸರಕಾರ ಹೇಳುತ್ತಿದೆ. ನಾವು ಸರಕಾರದ ವಾದ ಒಪ್ಪಿದರೆ, ಸಕಾಲದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕೆಂಬ ಸಾಂವಿಧಾನಿಕ ನಿಯಮ ಉಲ್ಲಂಘನೆ ಮಾಡಿದಂತಾಗಿದೆ. ಹಾಗಾಗಿ ನ್ಯಾಯಾಲಯ ಸರಕಾರದ ವಾದವನ್ನು ಒಪ್ಪುವುದು ಕಷ್ಟ'' ಎಂದು ಹೇಳಿತು.


''ಅಲ್ಲದೆ, ಚುನಾವಣೆಗೆ ಎಲ್ಲ ಸಿದ್ಧತೆಗಳು ಪೂರ್ಣಗೊಂಡಿರುವುದರಿಂದ ಮತದಾರರ ಪಟ್ಟಿ ಸಿದ್ಧಪಡಿಸಲು ಕೋಟ್ಯಂತರ ರೂ. ವೆಚ್ಚ ಆಗಿರುವ ಕಾರಣ, ಸರಕಾರವೇ ಕಾಯಿದೆಯನ್ನು ಬದಿಗಿಟ್ಟು ಚುನಾವಣೆ ನಡೆಸಿದರೆ ಸಾಂವಿಧಾನಿಕ ನಿಯಮಗಳನ್ನು ಪಾಲಿಸಿದಂತಾಗುತ್ತದೆಯಲ್ಲವೇ'' ಎಂದು ನ್ಯಾಯಪೀಠ ಪ್ರಶ್ನಿಸಿತು.

### ಚುನಾವಣಾ ಆಯೋಗದ ವಾದ

ರಾಜ್ಯ ಚುನಾವಣಾ ಆಯೋಗದ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಕೆ.ಎನ್. ಫಣೀಂದ್ರ ''ಹೊಸದಾಗಿ ವಾರ್ಡ್‌ಗಳ ಮರು ವಿಂಗಡಣೆ ಮಾಡುವಾಗ ಒಂದೇ ವಾರ್ಡ್ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಹರಡಿ ಹಂಚಿಹೋಗುವುದನ್ನು ತಪ್ಪಿಸಲಾಗುವುದು ಎಂದು ಸರಕಾರ ಹೇಳಿದೆ. ಆದರೆ, ಹಾಲಿ ಇರುವ ವಾರ್ಡ್‌ಗಳಲ್ಲಿಯೇ ಆ ರೀತಿ ಕ್ರಮ ಜರುಗಿಸಲಾಗಿದ್ದು, ಯಾವ ವಾರ್ಡ್ ಕೂಡ ಎರಡು-ಮೂರು ವಿಧಾನಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ'' ಎಂದರು. ''ಅಲ್ಲದೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಏನೂ ಬದಲಾವಣೆಯಾಗಿಲ್ಲ. ಜತೆಗೆ ಸರಕಾರ ಬಿಬಿಎಂಪಿ ಕಾಯಿದೆ ಜಾರಿಗೆ ತಂದಿರುವುದು ಅಕ್ಟೋಬರ್‌ನಲ್ಲಿ. ಆಯೋಗ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ ನಂತರ ಸಮಿತಿ ರಚನೆ ಮಾಡಲಾಗಿದೆ'' ಎಂದು ವಿವರಿಸಿದರು.

### ಅರ್ಜಿದಾರರು ಹೇಳಿದ್ದೇನು ?

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್, ''ಜಂಟಿ ಸದನ ಸಮಿತಿಯ ಶಿಫಾರಸು ಆಧರಿಸಿ ಪಾಲಿಕೆಯ ವಾರ್ಡ್‌ಗಳ ಪುನರ್ ವಿಂಗಡಣೆಗೆ ಕಾನೂನು ಜಾರಿಗೊಳಿಸಲಾಗಿದೆ ಎಂದು ಸರಕಾರ ಹೇಳಿದೆ. ಆದರೆ, ಸರಕಾರ ಸಮಿತಿ ಬಗ್ಗೆ ತಪ್ಪು ಮಾಹಿತಿ ನೀಡುತ್ತಿದೆ. ಸಮಿತಿ ರಚನೆ ಮಾಡಿದ್ದು ಬಿಬಿಎಂಪಿಗೆ ಹೊಸ ಕಾಯಿದೆ ರಚಿಸುವ ಸಲುವಾಗಿಯೇ ಹೊರತು, ವಾರ್ಡ್‌ಗಳ ಪುನರ್ ವಿಂಗಡಣೆಗೆ ಶಿಫಾರಸು ಮಾಡುವ ಉದ್ದೇಶಕ್ಕಲ್ಲ. ಕಾನೂನು ಜಾರಿಗೊಳಿಸಿರುವುದು ಪಾಲಿಕೆಯ ಅಧಿಕಾರಾವಧಿ ಮುಕ್ತಾಯದ ಬಳಿಕ. ಹಾಗಾಗಿ ಅದನ್ನು ಒಪ್ಪಲಾಗದು. ಸಾಂವಿಧಾನದ ಕಲಂ 243(ಯು) ಅನ್ವಯ ಚುನಾವಣೆಗಳನ್ನು ನಡೆಸಲೇಬೇಕು'' ಎಂದು ಹೇಳಿದರು.



''ಈಗಾಗಲೇ ಹೈಕೋರ್ಟ್ ವಿಭಾಗೀಯಪೀಠ ಗ್ರಾಮ ಪಂಚಾಯ್ತಿ ಚುನಾವಣೆ ತೀರ್ಪಿನಲ್ಲಿ ಚುನಾವಣೆ ನಡೆಸುವ ವಿಚಾರವಾಗಿ ಸ್ಪಷ್ಟ ನಿರ್ದೇಶನ ನೀಡಿದೆ. ಚುನಾವಣೆ ಮುಂದೂಡುವ ಅಧಿಕಾರ ಸರಕಾರಕ್ಕಿಲ್ಲ,''ಎಂದು ವಿವರಿಸಿದರು.

### ಸರಕಾರದ ಸ್ಪಷ್ಟನೆ

ಸರಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ''ಸರಕಾರಕ್ಕೆ ಚುನಾವಣೆ ಮುಂದೂಡುವ ಯಾವುದೇ ಉದ್ದೇಶವಿಲ್ಲ, ಬಿಬಿಎಂಪಿಯ ವ್ಯಾಪ್ತಿ ಇದೀಗ ವಿಸ್ತಾರವಾಗಿ ಬೆಳೆದಿದೆ. ಹಾಗಾಗಿ, ಬಿಬಿಎಂಪಿಯ ವಾರ್ಡ್‌ಗಳನ್ನು ಮರುವಿಂಗಡಣೆ ಮಾಡುವ ಅಗತ್ಯವಿದೆ. ಜಂಟಿ ಸದನ ಸಮಿತಿಯ ಶಿಫಾರಸಿನಂತೆ ವಾರ್ಡ್‌ಗಳ ಮರುವಿಂಗಡಣೆಗೆ ಪ್ರತ್ಯೇಕ ಕಾಯಿದೆ ಜಾರಿಗೊಳಿಸಲಾಗಿದೆ. ಹಾಗಾಗಿ, ಸದ್ಯಕ್ಕೆ ಚುನಾವಣೆ ನಡೆಸಲು ಸಾಧ್ಯವಾಗುತ್ತಿಲ್ಲ, ಮರು ವಿಂಗಡಣಾ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಚುನಾವಣೆ ನಡೆಸಲಾಗುವುದು'' ಎಂದರು. ''ವಾರ್ಡ್ ಪುನರ್ ವಿಂಗಡಣೆ ಕಾರ್ಯ ಕೈಗೆತ್ತಿಕೊಳ್ಳಲು ವಿಳಂಬವಾಗಿದ್ದಕ್ಕೆ ಕೋವಿಡ್ ಮತ್ತಿತರ ಕಾರಣಗಳಿವೆ. ಆದರೂ ಘನ ಉದ್ದೇಶದಿಂದಲೇ ಸರಕಾರ ಕಾಯಿದೆ ರೂಪಿಸಿದೆ'' ಎಂದರು.